ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ಜಲ್ಲಿ ಕ್ರಷರ್ಗಳ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

162 (188) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜಲ್ಲಿ ಕ್ರಷರ್ಗಳ ಮಾಲೀಕರಿಂದ ಸರ್ಕಾರಕ್ಕೆ ಕಳೆದ ಎರಡು ವರ್ಷಗಳಿಂದ ಬರಬೇಕಾಗಿರುವ ಬಾಕಿ ರಾಯಧನವೆಷ್ಟು ; ಈ ಬಾಕಿ ರಾಯಧನ ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಮುಟ್ಟಗೋಲು ಹಾಕಿದ ಜಲ್ಲಿಕಲ್ಲು ಮತ್ತು ಇತರ ಖನಿಜಗಳ ಮೊತ್ತವೆಷ್ಟು ; ಪ್ರಸ್ತುತ ಈ ಮುಟ್ಟಗೋಲು ಹಾಕಿದ ಜಲ್ಲಿಕಲ್ಲುಗಳನ್ನು ಯಾವ ರೀತಿ ವಿಲೇ ಮಾಡಲಾಗಿದೆ ; ಇವುಗಳ ಮಾರಾಟದಿಂದ ಬಾಕಿ ಇರುವ ರಾಯಧನವನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಯಾವ ಯಾವ ಕ್ರಷರ್ನಲ್ಲಿ ಎಷ್ಟೆಷ್ಟು ಜಲ್ಲಿಕಲ್ಲುಗಳ ದಾಸ್ತಾನಿದೆ; ಕ್ರಷರ್ ಘಟಕಗಳ ಸ್ಥಿತಿಗತಿ ಬಗ್ಗೆ ದ್ರೋಣ್ ಸರ್ವೆ ನಡೆಸಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ನಡೆಸಲಾಗುವುದು?